**ಮೂರನೇ ಅಪರ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ ರವರ ನ್ಯಾಯಾಲಯ, ಕನಕಪುರ**
**ಸಿ.ಸಿ ನಂ. 792/2019**

| | |
|---|---|
| ಚಾಸಾ : 2 | ಪ್ರಾಸಾ : 2 |
| ಹೆಸರು | ಕೆ ಟಿ ಶಿವದ್ಯಾವೇಗೌಡ |
| ತಂದೆ/ಗಂಡನ ಹೆಸರು | ಲೇ . ನಿಂಗಣ್ಣ |
| ವಯಸ್ಸು | 46 |
| ಉದ್ಯೋಗ | ವ್ಯವಸಾಯ |
| ವಿಳಾಸ | ಕೃಷ್ಣಯ್ಯನ ದೊಡ್ಡಿ ಗ್ರಾಮ |

**ದಿಃ 10.07.2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋದಿಸಲಾಯಿತು.**

**ಮುಖ್ಯವಿಚಾರಣೆ : ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರಿಂದಃ-**

ಆರೋಪಿತ ನನಗೆ ಪರಿಚಯ. ಮೃತ ವ್ಯಕ್ತಿ ನನ್ನ ದೊಡ್ಡಪ್ಪನ ಮಗ, ಚಾಸಾ- 1 , ಚಾಸಾ- 3 ರಿಂದ 10 ರವರು ನನಗೆ ಪರಿಚಯ

ಸಾಕ್ಷಿ ಒಂದು ಪಂಚನಾಮೆಯನ್ನು ನೋಡಿ ಅದರಲ್ಲಿರುವ ಒಂದು ಸಹಿಯನ್ನು ನೋಡಿ ತನ್ನ ಸಹಿ ಎಂದು ಗುರುತಿಸಿದ್ದು ಸದರಿ ಪಂಚನಾಮೆಯನ್ನು ಈಗಾಗಲೇ ನಿಪಿ-2 ಎಂದು , ಸಾಕ್ಷಿ ಸಹಿಯನ್ನು ನಿಪಿ-2(ಬಿ) ಎಂದು ಗುರುತಿಸಲಾಯಿತು.

ನಾನು ಪೊಲೀಸರಿಗೆ ಯಾವುದೇ ಹೇಳಿಕೆ ಕೊಟ್ಟಿಲ್ಲ.

(ಈ ಹಂತದಲ್ಲಿ ಸಾಕ್ಷಿಯು ಅಭಿಯೋಜನೆಯ ಪ್ರಕರಣಕ್ಕೆ ವಿರುದ್ದವಾಗಿ ಸಾಕ್ಷ್ಯ ನುಡಿದಿರುವುದರಿಂದ ಅವರನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲನ್ನು ಮಾಡಲು ಮಾನ್ಯ ಸರ್ಕಾರಿ ಅಭಿಯೋಜಕರು ರವರು ಅನುಮತಿಯನ್ನು ಕೋರಿದ್ದು, ಅನುಮತಿಯನ್ನು ನೀಡಲಾಯಿತು.)

**ಪಾಟೀ ಸವಾಲುಃ ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದಃ-**

ದಿಃ **30.06.2018** ರಂದು ಸಾತನೂರು ಠಾಣೆಯ ಪೊಲೀಸರು ಬೆಳಿಗ್ಗೆ **11.00 - 11.30** ಗಂಟೆ ವರೆಗೆ ನನ್ನ ಹಾಗೂ ಚಾಸಾ- **1** ಮತ್ತು **3** ರವರ ಸಮಕ್ಷಮ ನಿಪಿ-**2** ರ ಪ್ರಕಾರ ಪಂಚನಾಮೆ ಮಾಡಿ ವಾಹನ ಸಂಃ ಕೆಎ-**05**-ಕೆಹೆಚ್-**2407** ನ್ನು ಅಮಾನತ್ತು ಪಡಿಸಿಕೊಂಡರು ಎಂದರೆ ಸರಿಯಲ್ಲ.

ಸಾಕ್ಷಿಗೆ ದಿಃ **01.07.2018** ರಂದು ಅವನು ಪೊಲೀಸರಿಗೆ ನೀಡಿದ ಎಂಬ ಹೇಳಿಕೆಯ ಭಾಗವಾದ "ಅದೇ ವೇಳೆಗೆ ದೊಡ್ಡಾಲಹಳ್ಳಿ.... ಮುಂದಿನ ದಿನಗಳಲ್ಲಿ ಗುರುತಿಸುತ್ತೇನೆ", ಓದಿ ಹೇಳಿದಾಗ ಅಲ್ಲಗಳೆದಿದ್ದರಿಂದ ಸದರಿ ಹೇಳಿಕೆ ಭಾಗವನ್ನು ನಿಪಿ-**4** ಎಂದು ಗುರುತಿಸಲಾಯಿತು.

ಆರೋಪಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಪಾಟೀ ಸವಾಲು: ಆರೋಪಿ ಪರ ವಕೀಲರು ಪಾಟೀ ಸವಾಲು ಇಲ್ಲ ಎಂದು ಹೇಳಿರುತ್ತಾರೆ.**

ಮರುವಿಚಾರಣೆ : ಇಲ್ಲ

(ಸಾಕ್ಷಿಯ ವಿಚಾರಣೆಯನ್ನು ನಾನು ತೆರೆದ ನ್ಯಾಯಾಲಯದಲ್ಲಿ ಪಡೆದುಕೊಂಡಿರುತ್ತೇನೆ ಎಂದು ದೃಡಿಕರೀಸುತ್ತೇನೆ.)

ಓ ಹೇ ಕೇ ಸರಿ ಇದೆ,

ಮೂರನೇ ಅಪರ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್ ಸಿ., ಕನಕಪುರ.